ಅಧ್ಯಕ್ಷರು,—ಸಭೆಯ ಮುಂದೆ ಇಡಲಾಗಿದೆ.*

1986ನೇ ಇಸವಿಯ ಕರ್ನಾಟಕ ಕಡಲ ಮೀನುಗಾರಿಕೆ (ವಿನಿಯಮನ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

೧-೩೦ ಪಿ. ಎಂ.

ಶ್ರೀ ಸಿ. ಬೈರೇಗೌಡ (ಮೀನುಗಾರಿಕೆ ಮತ್ತು ಬಂದರುಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ಕಡಲ ಮೀನುಗಾರಿಕೆ (ವಿನಿಯಮನ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ,

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ, ''೧೯೮೬ನೇ ಇಸವಿಯ ಕರ್ನಾಟಕ ಕಡಲ ಮೀನುಗಾರಿಕೆ (ವಿನಿಯಮನ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತ್ತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿ. ಬೈರೇಗೌಡ (ಮೀನುಗಾರಿಕೆ ಮತ್ತು ಬಂದರುಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ಕಡಲ ಮೀನುಗಾರಿಕೆ (ವಿನಿಯಮನ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.*

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

ಅಧ್ಯಕ್ಷರು.—ಈಗ ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ.

ಶ್ರೀ ಎಸ್. ಬಂಗಾರಪ್ಪ (ವಿರೋಧ ಪಕ್ಷದ ನಾಯಕರು).—ಮಾನ್ಯ ಸಭಾಧ್ಯಕ್ಷರೆ, ಈಗ ಒಂದೂವರೆ ಗಂಟೆ. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯನ್ನು ತೆಗೆದುಕೊಂಡರೆ ಈಗ ಮುಕ್ತಾಯವಾಗುವುದಿಲ್ಲ. ಇವತ್ತು ಶುಕ್ರವಾರ, ನಾನ್ ಅಫಿಷಿಯಲ್ ಬಿಸಿನೆಸ್ ಡೇ. ಶುಕ್ರವಾರ ಖಾಸಗಿ ಸದಸ್ಯರ ನಿರ್ಣಯಗಳ ವಿಚಾರದಲ್ಲಿ ಚರ್ಚೆ ಮಾಡುವುದು ನಮಗಿರತಕ್ಕಂಥ ಹಕ್ಕು. ಆದಕ್ಕೆ ಹೋಗುವಷ್ಟರಲ್ಲಿ ಸದನ ಕಲಾಪದ ವೇಳೆ ಮುಗಿದಿರುತ್ತದೆ.

ಅಧ್ಯಕ್ಷರು.—ಒಬ್ಬರು ಮಾತನಾಡಲಿ.

ಶ್ರೀ ಎಸ್. ಬಂಗಾರಪ್ಪ—ಒಬ್ಬರು ಮಾತನಾಡಿದರೂ ಕೌಂಟ್ ಆಗುತ್ತದೆ. ಸೋಮವಾರ ಮಂಗಳವಾರ ರಾಜ್ಯಪಾಲರ ಭಾಷಣದ ನಿರ್ಣಯದ ಚರ್ಚೆಯನ್ನು ಇಟ್ಟುಕೊಳ್ಳೋಣ. ಇವತ್ತು ಮಾನ್ಯ ತಿಪ್ಪೇಸ್ವಾಮಿಯವರ ಖಾಸಗಿ ನಿರ್ಣಯ ಇದೆ, ಮತ್ತೊಬ್ಬರದೂ ಇದೆ. ಅದುದರಿಂದ ಈಗ ಖಾಸಗಿ ನಿರ್ಣಯಗಳನ್ನು ತೆಗೆದುಕೊಳ್ಳೋಣ.

ಅಧ್ಯಕ್ಷರು.—ಇದಕ್ಕೆ ಮಂತ್ರಿಗಳು ಏನು ಹೇಳುತ್ತಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಸಂಬಂಧಪಟ್ಟ ಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ.

ಅಧ್ಯಕ್ಷರು —ರಾಜ್ಯಪಾಲರ ಭಾಷಣವನ್ನು ತೆಗೆದುಕೊಂಡು ಒಬ್ಬರು ಮಾತನಾಡಲಿ.

ಶ್ರೀ ಎಸ್. ಬಂಗಾರಪ್ಪ.—ಹಾಗೆ ಮಾಡಿದರೂ ಇವತ್ತೂ ಕೌಂಟ್ ಆಗುತ್ತದೆ. ಆದ್ದರಿಂದ ಇವತ್ತು ಗವರ್ನರ್ಸ್ ಅಡ್ರೆಸ್ ಮೇಲೆ ಚರ್ಚೆ ಬೇಡ, ಸೋಮವಾರ, ಮಂಗಳವಾರ ತೆಗೆದುಕೊಳ್ಳೋಣ. ಇವತ್ತು ಶುಕ್ರವಾರ, ಖಾಸಗಿ ನಿರ್ಣಯದ ದಿನ, ಖಾಸಗಿ ನಿರ್ಣಯಗಳನ್ನು ತೆಗೆದುಕೊಳ್ಳೋಣ.

ಶ್ರೀ ಆರ್. ಎಲ್. ಜಾಲಪ್ಪ.—ಇವತ್ತು ಅದು ಮುಗಿಯಬೇಕು ಎಂದು ಕಾಣುತ್ತದೆ.

---

* Annexure.